## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.

ಓ.ಎಸ್.48/2018

ಸಾಕ್ಷಿಯನ್ನು ದಿಃ **13.02.2026** ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಅರ್ಜಿಯ ಮೇಲಿನ ಆದೇಶದಂತೆ ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿಯರ ಪರಃಶ್ರೀ**. LKJ **ವಕೀಲರಿಂದ**:

ನನ್ನ ಅಳಿಯ ಪರಮೇಶ್ ರವರ ಕಡೆಯಿಂದ ಪ್ರತಿವಾದಿಯ ಮಗನಿಗೆ ಪೋಲೀಸ್ ಇಲಾಖೆಯಲ್ಲಿ ಕೆಲಸ ಕೊಡಿಸುವುದಾಗಿ ನಾನು ಆಶ್ವಾಸನೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಆ ರೀತಿ ಆಶ್ವಾಸನೆ ನೀಡಿದ ಸಮಯದಲ್ಲಿ ನಾನು ಲಿಖಿತ ಪರೀಕ್ಷೆ, ದೈಹಿಕ ಪರೀಕ್ಷೆ ಮತ್ತು ಲಂಚ ನೀಡುವ ಸಲುವಾಗಿ ಸುಮಾರು 7 ರಿಂದ 8 ಲಕ್ಷ ಖರ್ಚಾಗುತ್ತದೆ ಎಂದು ಹೇಳಿದ್ದೆ ಎಂದರೆ ಸರಿಯಲ್ಲ. ಆಗ ಪ್ರತಿವಾದಿಯು ತನಗೆ ಹೊಗೆಸೊಪ್ಪಿನ ಬೆಳೆ ನನ್ನ ಕೈಗೆ ಬಂದು ಅದನ್ನು ಮಾರಾಟ ಮಾಡಿದ ನಂತರ ಹಣ ಹೊಂದಿಸಬಹುದು ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನಾನು ರೂ.5 ಲಕ್ಷವನ್ನು ನಾನೇ ಹೊಂದಿಸುವುದಾಗಿ ಅದಕ್ಕೆ ಬಡ್ಡಿಯನ್ನು ಕೊಡಬೇಕು ಎಂದು ಪ್ರತಿವಾದಿಯ ಬಳಿ ಹೇಳಿದ್ದೆ ಎಂದರೆ ಸರಿಯಲ್ಲ. ರೂ.5 ಲಕ್ಷವನ್ನು ನನ್ನ ಅಳಿಯನಿಗೆ ಕೊಟ್ಟಿದ್ದಾಗಿ ಹೇಳಿ ಪ್ರತಿವಾದಿಯ ಕಡೆಯಿಂದ ಖಾಲಿ ಸ್ಟ್ಯಾಂಪ್ ಪೇಪರ್ ಮತ್ತು ಖಾಲಿ ಚೆಕ್ ಗಳಿಗೆ ಸಹಿ ಪಡೆದುಕೊಂಡೆ ಎಂದರೆ ಸರಿಯಲ್ಲ. ನಾನು ಅಳಿಯನಿಗೆ ಕೊಟ್ಟಿದ್ದೇನೆ ಎಂದು ಹೇಳಿದ ರೂ.5 ಲಕ್ಷ ಮತ್ತು ಕೊಡಬೇಕಾಗಿದ್ದ ಉಳಿಕೆ ಹಣವನ್ನು ಸೇರಿಸಿ ಒಟ್ಟು 4 ಖಾಲಿ ಚೆಕ್ ಗಳಿಗೆ ಪ್ರತಿವಾದಿಯ ಸಹಿಯನ್ನು ಪಡೆದುಕೊಂಡೆ ಎಂದರೆ ಸರಿಯಲ್ಲ. ನಾನು ಮೇಲೆ ಹೇಳಿದ 4 ಚೆಕ್ ಗಳ ಪೈಕಿ ನಿಡಿ-24ರಂತೆ ಒಂದು ಚೆಕ್ಕನ್ನು ನನ್ನ ಪತ್ನಿ ಶಾರದಮ್ಮರವರ ಹೆಸರಿಗೆ ರೂ.2ವರೆಲಕ್ಷಗಳಿಗೆ, ಇನ್ನೊಂದು ಚೆಕ್ಕನ್ನು ನನ್ನ ಹೆಸರಿಗೆ ರೂ.3 ಲಕ್ಷಕ್ಕೆ, ಇನ್ನೊಂದು ಚೆಕ್ಕನ್ನು ನನ್ನ ಅಳಿಯ K.Hಪರಮೇಶ್ ರವರ ಹೆಸರಿಗೆ ರೂ.3 ಲಕ್ಷಕ್ಕೆ ಮತ್ತು ಇನ್ನೊಂದು ಖಾಲಿ ಚೆಕ್ಕನ್ನುನನ್ನ ಮಗಳು ವೀಣಾಳ ಹೆಸರಿಗೆ ಬರೆಸಿಕೊಂಡೆ ಎಂದರೆ ಸರಿಯಲ್ಲ. ನಾನು ಮೇಲೆ ಹೇಳಿದ 4 ಚೆಕ್ಕುಗಳನ್ನು ಪಡೆದು ಕೊಳ್ಳುವ ಸಮಯದಲ್ಲಿ ಚೆಕ್ ಪುಸ್ತಕದ ಮೊದಲ ಪುಟದಲ್ಲಿ ಯಾರು ಯಾರಿಗೆ ಎಷ್ಟು ಮೊತ್ತಕ್ಕೆ ಚೆಕ್ ಗಳನ್ನು ನೀಡಿದ್ದಾರೆ ಎಂದು ನನ್ನ ಸ್ವ ಹಸ್ತಾಕ್ಷರದಲ್ಲಿ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಹೊಗೆಸೊಪ್ಪು ಮಾರಾಟ ಮಾಡಿ ಬಂದ ಹಣದಿಂದ ನನಗೆ

ರೂ. 3ಲಕ್ಷ ಕೊಟ್ಟರು ಎಂದರೆ ಸರಿಯಲ್ಲ. ನನ್ನ ಹೆಸರಿಗೆ ಬರೆದುಕೊಂಡಿದ್ದ 3 ಲಕ್ಷದ ಚೆಕ್ಕನ್ನು ಹಣ ಬಂದ ನಂತರ ನಾನು ಪ್ರತಿವಾದಿಗೆ ನಿಪಿ–25 ರಂತೆ ವಾಪಸ್ಸು ಕೊಟ್ಟೆ ಎಂದರೆ ಸರಿಯಲ್ಲ. ಆ ರೀತಿ ಚೆಕ್ಕನ್ನು ವಾಪಸ್ಸು ಕೊಟ್ಟ ನಂತರ ನಿಡಿ–24 ರಲ್ಲಿ ನನ್ನ ಹೆಸರಿನ ಮುಂದೆ ಹಣ ಪಡೆದಿರುತ್ತೆ ವಜಾವಾಗಿದೆ ಎಂದು ಸ್ವತಃ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಿಡಿ–24 ರಲ್ಲಿರುವ ಸಂಪೂರ್ಣ ಬರವಣಿಗೆ ನನ್ನ ಹಸ್ತಾಕ್ಷರ ಎಂದರೆ ಸರಿಯಲ್ಲ. ಸೃಷ್ಟಿ ಮಾಡಿಕೊಂಡಿದ್ದಾರೆ. ನನಗೆ ಹಣ ಬಂದ ನಂತರ ದೈಹಿಕ ಮತ್ತು ಲಿಖಿತ ಪರೀಕ್ಷೆಗಾಗಿ ಹಾಗೂ ಇತರೆ ಖರ್ಚಿಗಾಗಿ ರೂ.1,80,000/– ಬೇಕು ಎಂದು ನಾನು ಹೇಳಿದಾಗ ಪ್ರತಿವಾದಿ ಹಣ ಇಲ್ಲ ಎಂದು ಹೇಳಿದ ಕಾರಣ ಅವರಿಂದ ನಾನು ಚಿನ್ನದ ಒಡವೆಗಳನ್ನು ಪಡೆದುಕೊಂಡೆ ಎಂದರೆ ಸರಿಯಲ್ಲ. ಪ್ರತಿವಾದಿಯಿಂದ ಪಡೆದುಕೊಂಡ ಚಿನ್ನದ ಒಡವೆಗಳು ಈಗಲೂ ಕೂಡ ನನ್ನ ಬಳಿ ಇದೆ ಎಂದರೆ ಸರಿಯಲ್ಲ. ನನಗೆ ರೂ.1,80,000/–ಹಣ ಬಂದ ನಂತರ ದಿಃ 26.03.2015 ರಂದು ನಾನು ಬೆಂಗಳೂರಿನ ವಿಧಾನ ಸೌಧದಲ್ಲಿ ಗೃಹಮಂತ್ರಿಯವರನ್ನು ಭೇಟಿ ಮಾಡಿಸುವುದಾಗಿ ಹೇಳಿ ಪ್ರತಿವಾದಿಯರನ್ನು ಕರೆದುಕೊಂಡು ಹೋಗಿದ್ದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಪ್ರತಿವಾದಿಯನ್ನು ವಿಧಾನ ಸೌದದ ಒಳಗೆ ಕರೆದುಕೊಂಡು ಹೋಗುವ ಬಗ್ಗೆ ನಿಡಿ–26ರಂತೆ ಸಂದರ್ಶಕರ ಅನುಮತಿ ಪತ್ರವನ್ನು ಅಂದಿನ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಗುರುಕಾರ್ ರವರಿಂದ ಕೊಡಿಸಿದ್ದೆ ಎಂದರೆ ಸರಿಯಲ್ಲ. ಅನಂತರ ನಾನು ಬೇರೆ ಬೇರೆ ಕಾರಣಗಳನ್ನು ಹೇಳಿ ಪ್ರತಿವಾದಿಯಿಂದ ರೂ.7ವರೆಲಕ್ಷ ಹಣ ಪಡೆದುಕೊಂಡೆ ಎಂದರೆ ಸರಿಯಲ್ಲ. ಆ ನಂತರ ಆಶ್ವಾಸನೆಯಂತೆ ಪ್ರತಿವಾದಿಯ ಮಗನಿಗೆ ಪೋಲೀಸ್ ಕೆಲಸ ಕೊಡಿಸಲು ಸಾಧ್ಯವಾಗಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಮಗನಿಗೆ ಕೆಲಸ ಕೊಡಿಸುವ ಉದ್ದೇಶ ನನಗಿರದೇ ಕೇವಲ ಅವರಿಂದ ಹಣ ಪಡೆದುಕೊಳ್ಳುವ ಉದ್ದೇಶ ನನಗೆ ಇತ್ತು ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ಕೊಟ್ಟಂತಹ ರೂ.5ಲಕ್ಷದ ಬಗ್ಗೆ ಪ್ರತಿತಿಂಗಳು ಬಡ್ಡಿಯನ್ನು ಸ್ವೀಕರಿಸಿ ಆ ಬಗ್ಗೆ ಬರವಣಿಗೆ ಮಾಡಿ ಕೊಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯಿಂದ ಒಟ್ಟು 4 ಲಕ್ಷ ಪಡೆದುಕೊಂಡಿದ್ದೇನೆ ಎಂದು ನಿಡಿ–29ರ ಪುಸ್ತಕದಲ್ಲಿ ನನ್ನ ಹಸ್ತಾಕ್ಷರದಲ್ಲಿ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನನಗೆ ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಯಲ್ಲಿ ಸಹಿ ಮಾಡುವ ಅಭ್ಯಾಸ ಇದೆ ಎಂದರೆ ಇಲ್ಲ. ನಿಡಿ–29ರಲ್ಲಿ ಹಣ ಸ್ವೀಕರಿಸಿದ ಬಗ್ಗೆ ಬರೆದಿರುವ ನಮೂದುಗಳು ನನ್ನ ಸ್ವ ಹಸ್ತಾಕ್ಷರಗಳು ಎಂದರೆ ಸರಿಯಲ್ಲ. ಸೃಷ್ಟಿ

ಮಾಡಿಕೊಂಡಿದ್ದಾರೆ. ನಿಡಿ–29ರಲ್ಲಿರುವ S.B. ಪುಟ್ಟಶೆಟ್ಟಿ ಎಂಬ ಕನ್ನಡದ ಸಹಿಗಳು ನನ್ನದು ಎಂದರೆ ಸರಿಯಲ್ಲ. ಪ್ರತಿವಾದಿಯ ಮಗನಿಗೆ ಕೆಲಸ ಕೊಡಿಸುವುದಾಗಿ ಹೇಳಿ ನಾನು ಹಣ ಪಡೆದುಕೊಂಡಿದ್ದರೂ ಸಹ ಕೆಲಸ ಕೊಡಿಸದೇ ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ಹಣದ ವ್ಯವಹಾರಕ್ಕೆ ಸಂಬಂಧಿಸಿದಂತೆ ಮೇಲೆ ಹೇಳಿದ ಎಲ್ಲಾ ಬರವಣಿಗಳು ನನ್ನ ಹಸ್ತಾಕ್ಷರದಲ್ಲಿ ಇದ್ದರೂ ಕೂಡ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಬರವಣಿಗೆಗಳ ಕೆಳಗೆ ಇರುವ S.B.ಪುಟ್ಟಶೆಟ್ಟಿ ಎಂಬ ಸಹಿ ನನ್ನದಾಗಿದ್ದರು ಸಹ ಅಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಅದರಲ್ಲಿ ಹಣದ ವ್ಯವಹಾರಕ್ಕಾಗಿ S.B.ಪುಟ್ಟಶೆಟ್ಟಿ ಎಂದು ಇಂಗ್ಲಿಷ್ ನಲ್ಲಿ ಹಾಕಿರುವ ಸಹಿ ನನ್ನದು ಎಂದರೆ ಸರಿಯಲ್ಲ. ಸಾಕ್ಷಿಗೆ ವಕಾಲತ್ತು ಮತ್ತು ಒಂದು ದಾಖಲೆಯಲ್ಲಿರುವ ಸಹಿಯನ್ನು ತೋರಿಸಲಾಗಿ ಎರಡು ಸಹಿಗಳು ಒಂದೇ ಆಗಿದೆ ಎಂದರೆ ಅಲ್ಲ ಎಂದು ನುಡಿಯುತ್ತಾರೆ. ಸದರಿ ಸಹಿಯನ್ನು ಬೆರಳಚ್ಚು ತಜ್ಞರಿಗೆ ಕಳುಹಿಸಿ ವರದಿಯನ್ನು ತರಿಸಿಕೊಳ್ಳಲು ನನ್ನ ಅಭ್ಯಂತರ ಇಲ್ಲ. ಸದರಿ ದಾಖಲೆಯಲ್ಲಿರುವ ಸಹಿ ನನ್ನದಾಗಿದ್ದರೂ ಸಹ ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಕೆಲಸ ಕೊಡಿಸಲು ಆಗದೇ ಇದ್ದ ಕಾರಣ ಹಾಗೂ ಹಣ ತೆಗೆದುಕೊಂಡಿದ್ದರಿಂದ ಪ್ರತಿವಾದಿ ನನ್ನ ವಿರುದ್ಧ ದಿಃ 28.11.2017 ರಂದು ಮೈಸೂರು ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗೆ ಒಂದು ದೂರನ್ನು ಕೊಟ್ಟರು ಎಂದರೆ ಸರಿ. ಸದರಿ ದೂರಿಗೆ Police Inspector ಆದ ನನ್ನ ಅಳಿಯನ ಪ್ರಭಾವ ಬಳಸಿ ಪ್ರತಿವಾದಿಗೆ ನಿಡಿ–19 ರಂತೆ ಹಿಂಬರಹ ಕೊಟ್ಟರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನ್ನ ಅಳಿಯ police inspector ಅಲ್ಲ ಎಂದು ನುಡಿಯುತ್ತಾರೆ. ಅವರು ಏನು ಕೆಲಸ ಮಾಡುತ್ತಾರೆ ಎಂದರೆ ಪೋಲೀಸ್ ಆಗಿದ್ದಾರೆ. ಪ್ರತಿವಾದಿ ನನ್ನ ವಿರುದ್ಧ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗೆ ದೂರು ನೀಡಿದ ನಂತರ ಅದರಿಂದ ನನಗೂ ನನ್ನ ಅಳಿಯನಿಗೂ ತೊಂದರೆಯಾಗುತ್ತದೆ ಎಂದು ತಿಳಿದು ನಾನು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ದಿಃ03.01.2018 ರಂದು ಪ್ರತಿವಾದಿ ಕುಪ್ಪೆ ಗ್ರಾಮದ ಜಮೀನಿನ ಬಗ್ಗೆ ಹಣಕಾಸು ವ್ಯವಹಾರಕ್ಕೆ ಸಂಬಂಧಿಸಿದಂತೆ ಫೋನ್ ಮಾಡಿ ಗಲಾಟೆ ಮಾಡುತ್ತಿದ್ದಾರೆ ಎಂದು ಮೈಸೂರಿನ ವಿಜಯನಗರ ಪೋಲೀಸ್ ಠಾಣೆಗೆ ನಿಡಿ–21 ರಂತೆ ಸುಳ್ಳು ದೂರನ್ನು ಕೊಟ್ಟೆ ಎಂದರೆ ಸರಿಯಲ್ಲ. ಆದರೆ ದೂರು ಕೊಟ್ಟಿದ್ದೇನೆ. ಸದರಿ ದೂರಿನಲ್ಲಿ ನಾನು ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಯಲ್ಲಿ ಸಹಿ

ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಡಿ-21ರಲ್ಲಿರುವ ಎರಡು ಸಹಿಗಳು ನನ್ನದು ಎಂದರೆ ಇಂಗ್ಲಿಷ್ ನಲ್ಲಿ ಹಾಕಿರುವ ಸಹಿ ನನ್ನದಾಗಿದೆ. ನಂತರ ಮೈಸೂರು ವಿಜಯನಗರ ಠಾಣೆಯಿಂದ ಪ್ರತಿವಾದಿಯನ್ನು ಕರೆದು ಹೇಳಿಕೆ ಪಡೆದುಕೊಂಡರು ಎಂದರೆ ಸರಿ. ಪ್ರತಿವಾದಿ ತನ್ನ ಹೇಳಿಕೆಯಲ್ಲಿ ನನ್ನ ಮತ್ತು ಅವರ ಮಧ್ಯೆ ನಡೆದ ಹಣಕಾಸಿನ ಸಂಪೂರ್ಣ ವಿವರಗಳನ್ನು ನೀಡಿ ಹೇಳಿಕೆ ಕೊಟ್ಟರುಎಂದರೆ ಹೇಳಿಕೆ ನೀಡುವಾಗ ನಾನು ಕೂಡ ಹಾಜರಿದ್ದು, ಆ ರೀತಿ ಹೇಳಿಕೆಯನ್ನು ನೀಡಿಲ್ಲ. ಪ್ರತಿವಾದಿಯಿಂದ ನಾನು ಹಣ ಪಡೆದುಕೊಂಡ ಬಗ್ಗೆ ಸಾಕಷ್ಟು ದಾಖಲೆಗಳು ಇದ್ದರೂ ಕೂಡ ಅವರಿಗೆ ಹಣ ವಾಪಸ್ಸು ಕೊಡಬೇಕಾಗುತ್ತದೆ ಎಂದು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬಡ್ಡಿ ವ್ಯವಹಾರವನ್ನು ಮಾಡುವ ಕಾರಣ ದಾಖಲೆಗಳನ್ನು ಸೃಷ್ಟಿ ಮಾಡುವ ಬಗ್ಗೆ ನನಗೆ ಸಂಪೂರ್ಣವಾಗಿ ಗೊತ್ತಿದೆ ಎಂದರೆ ಸರಿಯಲ್ಲ. ನನ್ನ ಅನುಭವದ ಆಧಾರದ ಮೇರೆಗೆ ಈ ದಾವೆಯಲ್ಲಿ ನಾನುಹಾಜರುಪಡಿಸಿದ ದಾಖಲೆಗಳನ್ನು ನಾನೇ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಕೊಡಬೇಕಾಗಿರುವ ಹಣದ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.